**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 35/2022**

ಪಿ.ಡಬ್ಲು: **11** ಸಿಡಬ್ಲು:**21**

ಸಾಕ್ಷಿಯ ಹೆಸರು : ಉದಯಸಿಂಗ್

ತಂದೆಯ ಹೆಸರು : ನರಸಿಂಗ್ ರಜಪೂತ್

ವಯಸ್ಸು : 39 ವರ್ಷ

ವೃತ್ತಿ : ವಲಯ ಆಯುಕ್ತರು, ಮಹಾನಗರ ಪಾಲಿಕೆ, ಕಲಬುರ್ಗಿ

ವಾಸಸ್ಥಳ : ಕಲಬುರ್ಗಿ

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: 25.09.2025.**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-**

**1)** ದಿನಾಂಕ **13.08.2021** ರಿಂದ **19.06.2022** ರವರೆಗೆ ನಾನು ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ವಲಯ ಆಯುಕ್ತರು ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ಡಿ.ವೈ.ಎಸ್.ಪಿ ಸಬ್ ಡಿವಿಜನ್ ಬಳ್ಳಾರಿ ಇವರು ದಿನಾಂಕ **05.12.2021** ರಂದು ಪತ್ರ ಬರೆದಿದ್ದು ಅದು ನಮ್ಮ ಕಛೇರಿಗೆ ದಿನಾಂಕ **07.12.2021** ರಂದು ಸ್ವೀಕೃತವಾಗಿರುತ್ತದೆ. ಸದರಿ ಪತ್ರದ ಮೂಲಕ ವಾರ್ಡ ನಂಬರ್-**9**, ರೂಪನಗುಡಿ ರಸ್ತೆ, ಹರಿಶ್ಚಂದ್ರ ಘಾಟ್ ಕ್ರಾಸ್, ಅಲ್ಲಿರುವ ಅನಿಲ್ ಕುಮಾರ ಇವರ ಹೆಸರಿನಲ್ಲಿರುವ ಆಸ್ತಿಯ ಖಾತಾ ಉತಾರವನ್ನು ಪೂರೈಸುವಂತೆ ಕೋರಿದ್ದರು. ಸದರಿ ಮನವಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ**21** ಎಂದು ಗುರುತಿಸಲಾಯಿತು.

**2)** ನಂತರ **9** ನೇ ವಾರ್ಡನ ಕರವಸೂಲಿಗಾರರು ಮತು ಕಂದಾಯ ನಿರೀಕ್ಷಕರು ನಮ್ಮ ಕಛೇರಿಯಲ್ಲಿರುವ ಆಸ್ತಿಗಳ ರಿಜಿಸ್ಟರ್ ಗಳನ್ನು ಪರಿಶೀಲಿಸಿ ಅದರಲ್ಲಿ ಅನಿಲ್ ಕುಮಾರ ಇವರ ಹೆಸರಿನಲ್ಲಿ ಯಾವುದೇ ರೀತಿಯ ಖಾತೆ ಇರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ. ಆ ಪ್ರಕಾರ ನಾನು ದಿನಾಂಕ **24.01.2022** ರಂದು ಡಿ.ವೈ.ಎಸ್.ಪಿ ಸಬ್ ಡಿವಿಜನ್ ಬಳ್ಳಾರಿ ಇವರ

ಕಛೇರಿಗೆ ಮಾಹಿತಿಯನ್ನು ಸಲ್ಲಿಸಿರುತ್ತೇನೆ. ಈಗ ಸದರಿ ಮಾಹಿತಿಯನ್ನು ನೋಡುತ್ತಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲು ಆರೋಪಿ ಪರ ಶ್ರೀ ಎಸ್. ಎಸ್.ಬಿ. ವಕೀಲರಿಂದಃ

ಶ್ರೀ ಎಸ್. ಎಸ್.ಬಿ. ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

C/c, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.